* ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕೆಲವು ಕಡೆಗಳಿಂದ ಬಂದಿವೆ. ತಪ್ಪಿತಸ್ಥರಮೇಲೆ ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಎಲ್ಲದೆ-ಈ ಏರ್ಪಾಡನ್ನು ನುವ್ಯವನ್ನುಗೊಳಿಸುವ ಉದ್ದೇಶದಿಂದ ಮದ್ರಾಸಿನಲ್ಲಿ ಮಾಡಿರುವಂತೆ ಇಲ್ಲಿಯೂ ಪ್ರೊವಿಷಿಯರ್ ಕಾರ್ಪೊರೇಷನ್ ಹ್ಯಾಂಡ್‌ಲೂಮ್ ವೀವರ್ಸ್ ಕೋ-ಆಪರೇಟಿವ್ ಸೊಸೈಟಿಯನ್ನು ಏರ್ಪಾಡುಮಾಡಿ, ಆದರ ಮೂಲಕ ಮಗ್ಗದ ವರಿಗೆ ಸಲ್ಲತಕ್ಕ ಎಲ್ಲ ಪದಾರ್ಥಗಳೂ, ಅವರು ಎಲ್ಲೇ ಇರಲಿ, ಕನ್ಯಾಕುಮಾರಿಯಲ್ಲಿರಲಿ, ಅವರಿಗೆ ಸರಬರಾಯಿ ಮಾಡುವುದಕ್ಕೆ ಒಂದು ಯೋಜನೆ ತಯಾರಾಗಿದೆ. ಕ್ರಮೇಣ ಪ್ರೊವಿಷಿಯರ್ ಮತ್ತು ಬ್ರಾಂಚ್ ಸೊಸೈಟಿಗಳ ಮೂಲಕ ನೂಲನ್ನು ಸರಬರಾಯಿಮಾಡುವ ಏರ್ಪಾಡಾಗುತ್ತದೆ.

ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಮೊನ್ನೆ ಮಾನ್ಯ ಶ್ರೀಹರಿಕೃಷ್ಣ ಮೆಹತಾಬ್‌ರವರು ಮದ್ರಾಸಿಗೆ ಬಂದಿದ್ದಾಗ, ಕೈಮಗ್ಗದವರಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಮಾತನಾಡುತ್ತಾ, ಬರುವ ಏಪ್ರಿಲ್ ತಿಂಗಳ ಹೊತ್ತಿಗೆ ಪರಿಸ್ಥಿತಿ ಬಹುಮಟ್ಟಿಗೆ ಸುಧಾರಿತವಾಗುತ್ತದೆಂದು ಹೇಳಿದ್ದಾರೆ. ಇದನ್ನೂ ಮಾನ್ಯ ಸದಸ್ಯರು ಗಮನಿಸಬೇಕು.

ಶ್ರೀ ಎಂ. ಮಾದಯ್ಯನವರು.— ಸರ್ಕಾರದವರು ಸಿವಿಲ್ ಸಪ್ಲೈಸ್ ಡೈರೆಕ್ಟರವರ ಅಥವ ಕೈಗಾರಿಕೆ ಮತ್ತು ವಾಣಿಜ್ಯ ಡೈರೆಕ್ಟರವರ ಮೂಲಕ ಡಿಪೋಗಳಿಗೆ ಕೊಡುತ್ತಿರುವ ಬೇಲುಗಳು ಸರಿಯಾಗಿ ಮಾರಾಟವಾಗುತ್ತವೆಯೇ ಅಥವಾ ಇಲ್ಲವೆ ಎಂಬ ಬಗ್ಗೆ ವರದಿಯೇನಾದರೂ ಬರುತ್ತವೆಯೇ?

The Hon'ble Sri H. C. DASAPPA.—The concerned Department will get the reports and if there is any complaint, they will also reach the Department, and suitable action will be taken wherever they go wrong.

ಶ್ರೀ ಎಂ. ಎಕ್. ಜೋಯಿಸರು (ಮೈಸೂರು ಜಿಲ್ಲೆ).—ಸರ್ಕಾರಿ ಡಿಪೋಗಳಿಂದ ಸರಬರಾಯಾಗ ಬೇಕಾದವರಿಗೆ ಆಗಿಲ್ಲದೆಯಿದ್ದರೆ ಅದಕ್ಕೆ ಸರಿಯಾದ ಕಾರ್ಯಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದಿರಿ, ಆ ಕಾರ್ಯಕ್ರಮಗಳೇನೆಂಬ ಬಗ್ಗೆ ಒಂದೆರಡನ್ನಾದರೂ ಹೇಳುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.— ಹೆಸರು, ಕುಲ, ಗೋತ್ರ ಇವುಗಳನ್ನೆಲ್ಲಾ ಇಲ್ಲಿ ಈಗ ಹೇಳುವುದಕ್ಕಾಗುವುದಿಲ್ಲ. ಬೇಕಾದರೆ ಆಮೇಲೆ ಆ ವಿವರಗಳನ್ನು ತಿಳಿಸುತ್ತೇನೆ.

ಶ್ರೀ ಟಿ. ರಾಮಾಚಾರ್ಯರು (ಕೋಲಾರ ಜಿಲ್ಲೆ).— ಸರ್ಕಾರಕ್ಕೆ ಬರುವ ನೂಲಿನ ಕೋಟಾದಲ್ಲಿ ರೇಷ್ಮೆ ಮಿಲ್ಲುಗಳಿಗೂ ಕೋಟಾ ಕೊಡುತ್ತಾರೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ದೊಡ್ಡ ಬಳ್ಳಾಪುರದಲ್ಲಿ ಆ ರೀತಿ ಕೊಟ್ಟ ಸಂದರ್ಭ ಗಮನಕ್ಕೆ ಬಂದು, ಅದನ್ನು ಸರಿಪಡಿಸಲಾಯಿತು.

ಶ್ರೀ ಟಿ. ರಾಮಾಚಾರ್ಯರು.—ಶಿಡ್ಲಘಟ್ಟದಲ್ಲಿರುವ ಕಿರ್ಲಾಸ್ಕರ್ ಸಿರ್ಕ್ ಮಿರ್ಸ್‌ಗೆ ನೂಲನ್ನು ಕೊಡುತ್ತಿದ್ದಾರೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

Janab J. MOHAMED VALIULLA (Kolar-Muslim).—What is the amount of scholarship that is allotted in the budget?

The Hon'ble Sri H. C. DASAPPA.—Notice.

Janab MOHAMED VALIULLA.—For how many students are you going to give scholarships?

The Hon'ble Sri H. C. DASAPPA.—Notice.

Janab MOHAMED VALIULLA.—It is mentioned in clause (g) of the answer; that handicom cloth is partially exempted from the levy of sales-tax. May I know what would have been the total realisation under sales-tax if such an exemption had not been given?

The Hon'ble Sri H. C. DASAPPA.—There are no figures available for that. Tax is collected at only one point; when the goods reach the consumer.

ಶ್ರೀ ನುಬ್ಬರಾಯಶೆಟ್ಟರು (ಕೋಲಾರ ಜಿಲ್ಲೆ).— ಕೋಟಾ ಲ್ಯಾಪ್ಸ್ ಆದರೆ ಅದನ್ನು ಯಾವ ರೀತಿ ಹಂಚುತ್ತೀರಿ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—There is no prospect of lapse now-a-days. Shortage ಇರುವಾಗ ಲ್ಯಾಪ್ಸ್ ಆಗುವ ಪ್ರಶ್ನೆಯೇ ಬರುವುದಿಲ್ಲ. ಹಿಂದೆ ಹೆಚ್ಚಾಗಿದ್ದಾಗ ಮಿಕ್ಕ ಕೈಮಗ್ಗದವರಿಗೇ ಸ್ವಲ್ಪ ಸ್ವಲ್ಪ ಕೊಡುತ್ತಿದ್ದೆವು, ಹಾಗೇ ಕೊಟ್ಟಿದ್ದೇವೆ.

ಶ್ರೀ ನುಬ್ಬರಾಯಶೆಟ್ಟರು.—ಬೇರೆಕಡೆ ಲ್ಯಾಪ್ಸ್ ಆಗಿರುವುದನ್ನು ಬೆಂಗಳೂರಿಗೆ ಕೊಟ್ಟಿದ್ದೀರಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅನ್ಯಾಯವಾಗಿ ಲ್ಯಾಪ್ಸ್ ಆಗಿ ಹೋಗುತ್ತದೆಂದು ಕಂಡ ಕೆಲವು ಸಂದರ್ಭಗಳಲ್ಲಿ ಮಾತ್ರ ಹಾಗೆ ಕೊಟ್ಟಿದ್ದೇವೆ.

ಶ್ರೀ ನುಬ್ಬರಾಯಶೆಟ್ಟರು.—ಆಮೇಲೆ ಅವರಿಗೆ ಕೊಡಬಹುದಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಯಾ ತಿಂಗಳಲ್ಲೇ ಕೊಡಬೇಕಾಗುತ್ತದೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ನ ಪ್ರಗದ).—ಗ್ರಾಮಾಂತರಗಳಲ್ಲಿರುವ ಕೈಮಗ್ಗದವರಿಗೆ ನೂಲು ಸರಿಯಾಗಿ ಸಿಕ್ಕುತ್ತಿಲ್ಲವೆಂಬುದು ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗಲೇ ಉತ್ತರ ಹೇಳಿದ್ದೇನೆ.

Mr. SPEAKER.—Next question, No. 37 Sri. M. V. Krishnappa.

Indianisation of the Kolar Gold Mines

*Q. 37.—Sri M. V. KRISHNAPPA (Kolar District—General).—

Will the Government be pleased to state.—

the measures taken by them to indianise the "Kolar Gold Mines"?

A.—The Hon'ble Sri H.C. DASAPPA (Minister for Finance and Industries).—

This will have to be done gradually. There is a specific clause regarding this in the Agreement.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಕೋಲಾರದ ಚಿನ್ನದ ಗಣಿಯನ್ನು ಇಂಡಿಯನೈಜ್ ಮಾಡುವುದಕ್ಕೆ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರೆಂಬುದನ್ನು ಹೇಳುತ್ತೀರಾ ?

* ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಒಂದೇ ಸಾರಿ ಎಲ್ಲವನ್ನೂ ಬದಲಾಯಿಸುವುದಕ್ಕಾಗುವುದಿಲ್ಲ, ಕ್ರಮೇಣ ಅದು ಆಗಬೇಕು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈ ಬಗ್ಗೆ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯೆಂಬುದು ನನ್ನ ಪ್ರಶ್ನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರೊಡನೆ ಸರ್ಕಾರದವರು ಮಾಡಿಕೊಂಡಿರುವ ಒಪ್ಪಂದದಲ್ಲೇ ಒಂದು ಷರತ್ತು ಇದೆ, ಅದರಂತೆ ಮಾಡುತ್ತೇವೆ. ಆ ಷರತ್ತು ಹೀಗಿದೆ:—

"The lessees will continue and intensify the policy of Indianisation of the supervisory and other staff and agree that all future vacancies will as far as possible be filled up by Indians possessing the necessary qualification giving first preference to Mysoreans."

Janab MOHAMED VALIULLA (Kolar Muslim).—Have you taken steps to Indianise only by filling up vacancies by Indians ? When are you taking steps to purchase the shares of the Company?

The Hon'ble Sri H. C. DASAPPA.—The person who put the question did not mean that.

Sri M. V. KRISHNAPPA.—Sir, I thought the Hon'ble Member got up on a point of order. I have some more questions. ಇಂಡಿಯನೈಜ್ ಮಾಡುವುದರಲ್ಲಿ ಸೂಪರ್‌ವೈಜರಿ ಸಿಬ್ಬಂದಿಯ ನೇಮಕದಲ್ಲಿ ಸಾಧ್ಯವಾದಷ್ಟು ಭಾರತೀಯರನ್ನೇ ತೆಗೆದುಕೊಳ್ಳುತ್ತಿದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಹೌದು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಎಷ್ಟು ಸ್ಥಾನಗಳಿಗೆ ತೆಗೆದುಕೊಂಡಿದ್ದಾರೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಬೆಳ್ಳಾರ ಮುಂತಾದ ಕಡೆ ಇಂಡಿಯನೈಜ್ ಮಾಡುವುದಕ್ಕೆ ಬದಲು ಆಂಗ್ಲೊಸೈಸ್ ಮಾಡುವುದಕ್ಕೆ ಪ್ರಯತ್ನ ಮಾಡಿರುವಹಾಗೆ ಕಾಣುತ್ತದೆ. ಜಾರ್ ಟೀಲರ್ ಕಂಪೆನಿಗೆ ವಹಿಸುವಂತೆ ವರ್ತಮಾನವಿದೆ, ಹೌದೆ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಪೌಂಡ್ ಕಂಪೆನಿಗಳು 'ರುಪೀ' ಕಂಪೆನಿಗಳಾಗಿ ಬದಲಾವಣೆಯಾಗಿವೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಡಿನಂಬರಿಗೆ ಮುಂಚೆ ಬದಲಾವಣೆಯಾಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ನಮಗೆ ನಷ್ಟವಾಗುವ ರೀತಿಯಲ್ಲಿ ಈ ಬದಲಾವಣೆ ಆಗಿದೆ ಎಂದು ಅನೇಕರು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಇಲ್ಲ. ನಮ್ಮ ಗಮನಕ್ಕೆ ಬಂದಿಲ್ಲ.

Janab MOHAMED VALIULLA.—What are the steps you have taken to make the concern an Indian concern and not foreign ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು foreign company. ಅದನ್ನು ನಾವೇ ತೆಗೆದುಕೊಳ್ಳುವ ರೀತಿ ಏರ್ಪಾಡುಮಾಡಿಲ್ಲ. ಸಾಧ್ಯವಾದರೆ ಬಂಡವಾಳದಲ್ಲಿ ಭಾಗವಹಿಸಬೇಕೆಂದು ಷೇರುಗಳನ್ನು ತೆಗೆದುಕೊಳ್ಳಬೇಕೆಂಬ ಉದ್ದೇಶ ಸರ್ಕಾರದವರಿಗಿದೆ.

Sri Kadidal MANJAPPA (Shimoga District—General).— Is there any period fixed in the agreement within which the Indianisation has to be completed ?

The Hon'ble Sri H. C. DASAPPA.—I have already said 'as far as possible and as early as possible.'

Sri Kadidal MANJAPPA.—As far as possible the vacancies can be filled up by Indians; is it the Government of Mysore or the company that will do it ?

The Hon'ble Sri H. C. DASAPPA.—The Government of Mysore also; because they have their own directors on the Board of Directors.

Sri H. SIDDAVEERAPPA (Chitaldrug District—General).—It was stated by the Hon'ble Minister "provided that the right type of Indians are available"; what steps have the Government taken to see that the Indians are qualified to get absorbed in that service ?

The Hon'ble Sri H. C. DASAPPA.—Some of them are being taken as Probationers in the Mining Companies.

Sri H. SIDDAVEERAPPA.—Are they given training also ?

The Hon'ble Sri H. C. DASAPPA.—Yes.

Mr. SPEAKER.—Question time is over.